ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

ಸ್ಪೆಷಲ್ ಕೇಸ್ ನಂಃ 204/2017

(ಫ್ರಾಸಾ-4 ಚಾಸಾ-7 )
ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು
ದಿಃ 11.02.2025

| | | |
|---|---|---|
| ಸಾಕ್ಷಿದಾರರ ಹೆಸರು | - | ನರಸಿಂಹಮೂರ್ತಿ |
| ತಂದೆಯ ಹೆಸರು | - | ಮದ್ದೂರಪ್ಪ |
| ವಯಸ್ಸು | - | 39 ವರ್ಷ, |
| ಉದ್ಯೋಗ | - | ಚಾಲಕ |
| ವಾಸ | - | ಅದ್ದೆ ವಿಶ್ವನಾಥಪುರ |

<u>ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ</u>

ಈಗ ನಾನು ಪಂಚನಾಮೆಯನ್ನು ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇರುತ್ತದೆ. ಸದರಿ ಪಂಚನಾಮೆಯನ್ನು ನಿಶಾನೆ ಪಿ-2 ಎಂದು ಹಾಗೂ ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿಶಾನೆ ಪಿ-2(ಎ) ಎಂದು ಗುರುತಿಸಲಾಯಿತು. ದಿಃ24.07.2016 ರಂದು ಶ್ರೀರಾಮನಹಳ್ಳಿಯ ಗೃಹಲಕ್ಷ್ಮಿ ಹೌಸಿಂಗ್ ಲೇಔಟ್ ಬಳಿ ಚಾಸಾ-1 ರವರಿಗೆ ಹಲ್ಲೆಯಾದ ವಿಚಾರವಾಗಿ ಪೋಲಿಸರು ಸ್ಥಳಕ್ಕೆ ಬಂದಿದ್ದು ಸ್ಥಳದಲ್ಲಿ ನಾನು, ಚಾಸಾ-6 ಮತ್ತು ಚಾಸಾ-1 ಹಾಜರಿದ್ದೆವು. ಚಾಸಾ-6 ರವರು ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ಮೂರು ದೊಣ್ಣೆಯನ್ನು ಹಾಜಪಡಿಸಿದಾಗ ಪೋಲಿಸರು ಅವುಗಳನ್ನು ಸ್ಥಳ ಅಮಾನತುಪಡಿಸಿಕೊಂಡು ಸ್ಥಳದಲ್ಲಿ ಪಂಚನಾಮೆ ಕ್ರಮ ಅನುಸರಿಸಿ ನನ್ನ ಸಹಿ ಪಡೆದರು. ಈಗ ಸಾಕ್ಷಿ ನ್ಯಾಯಾಲಯದಲ್ಲಿ ಮೂರು ದೊಣ್ಣೆಗಳನ್ನು ನೋಡಿ ಗುರುತಿಸಿದ್ದು ಅವುಗಳು ಈಗಾಗಲೇ ಮು.ಮಾ-1 ರಿಂದ 3 ಎಂದು ಗುರುತಿಸಲಾಯಿತು. ಚಾಸಾ-4 ಗೊತ್ತು. ಚಾಸಾ-4 ಇವರು ಚಾಸಾ-1 ರವರ ಸಂಬಂಧಿ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಎಸ್‌ಪಿಪಿ ರವರು ವಿನಂತಿಸಿದ್ದರಿಂದ ಸಾಕ್ಷಿಯ ಹೇಳಿಕೆ ಹಾಗೂ ಇತರೆ ನ್ಯಾಯಾಲಯದ ದಾಖಲಾತಿಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು.)

ಪಾಟೀ ಸವಾಲುಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

2. ದಿಃ25.07.2016 ರಂದು ಸಂಜೆ 4 ರಿಂದ 5 ಘಂಟೆಗೆ ಪೋಲಿಸರು ನಿಪಿ-2 ರಂತೆ ಸ್ಥಳ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಚಾಸಾ-4 ರವರು ಸ್ಥಳದಲ್ಲಿ ಹಾಜರಿದ್ದು ಮು.ಮಾ-1 ರಿಂದ 3 ದೊಣ್ಣೆಗಳನ್ನು ಪೋಲಿಸರಿಗೆ ತೋರಿಸಿರುತ್ತಾರೆ ಎಂದರೆ ಸರಿ. ಪಂಚನಾಮೆಗೆ ಚಾಸಾ-4 ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿ. ಘಟನೆಯಾಗಿ ಹತ್ತು ವರ್ಷಗಳಾಗಿರುವುದರಿಂದ ಮುಖ್ಯ ವಿಚಾರಣೆಯಲ್ಲಿ ಹೇಳುವಾಗ ವಿಷಯಗಳನ್ನು ಮರೆತು ಹೋಗಿದ್ದೆನು.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಬಿ ಎಸ್ ಜೆ ವಕೀಲರಿಂದಃ**

ಆರೋಪಿತರ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕೋಶ ಕೋರಿದ್ದು ಸೂಕ್ತ ಕಾರಣ ಇಲ್ಲದೇ ಇರುವುರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ**

(ಸಾಕ್ಷಿ ಹೇಳಿದಂತೆ ಹೇಳಿಕೆಯನ್ನು ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿ ಓದಿ ಹೇಳಿದ್ದು ಸಾಕ್ಷಿ ಸರಿ ಇರುವುದಾಗಿ ಒಪ್ಪಿರುತ್ತಾರೆ ಎಂದು ದೃಡೀಕರಿಸುತ್ತೇನೆ)

ಓ ಹೇ ಸಾ ಸ ಸಹಿ ಮಾಡಿದ್ದಾರೆ,

(ಕೆ. ಗುರುಪ್ರಸಾದ್)
ಎರಡನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು